## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 25.01.2017 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2017ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

### ಪ್ರಾರಂಭಿಕ

1. ಶ್ರೀ ಎಂ.ಪಿ. ನೋರೋನ್ಹ, ಸಿಂಡಿಕೇಟು ಸದಸ್ಯರು ಇವರು ಮಾನ್ಯ ಕುಲಪತಿಗಳಾದ ಕೆ. ಭೈರಪ್ಪನವರಿಗೆ ಇತ್ತೀಚೆಗೆ ತಿರುಪತಿಯಲ್ಲಿ ನಡೆದ All India Science Congressನಲ್ಲಿ ಪ್ರಧಾನ ಮಂತ್ರಿಯವರಿಂದ ಡಾ.ಸಿ.ವಿ.ರಾಮನ್ ಬರ್ತ್ ಸೆಂಟನರಿ ಪ್ರಶಸ್ತಿ ಪಡೆದುದಕ್ಕಾಗಿ ಇಡೀ ಸಿಂಡಿಕೇಟು ಸಭೆಯ ಪರವಾಗಿ ಅವರನ್ನು ಅಭಿನಂದಿಸಿದರು. "ಪ್ರೊ. ಕೆ. ಭೈರಪ್ಪನವರು ತಮ್ಮ ಶೈಕ್ಷಣಿಕ ಕ್ಷೇತ್ರದಲ್ಲಿ ಹಾಗೂ ತಾವು ಬೋಧಿಸುತ್ತಿರುವ ವಿಜ್ಞಾನ ಕ್ಷೇತ್ರದಲ್ಲಿ ಮಾಡಿರುವ ಆಳವಾದ ಅಧ್ಯಯನ, ಸಂಶೋಧನೆ, ಮಾಡಿರುವ ಸಾಧನೆಗಳು, ನೀಡಿರುವ ಕೊಡುಗೆಗಳು ಮತ್ತು ಅವುಗಳ ಪ್ರಭಾವ, ಇವುಗಳ ನೆಲೆಯಲ್ಲಿ ಈ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ. ಈ ಪ್ರಶಸ್ತಿಯು ಇದುವರೆಗೆ ಏಳು ಜನರಿಗೆ ನೀಡಲ್ಪಟ್ಟಿದ್ದು, ಪ್ರೊ.ಕೆ. ಭೈರಪ್ಪನವರು ಕರ್ನಾಟಕದಿಂದ ಪ್ರಶಸ್ತಿ ಪಡೆದ ನಾಲ್ಕನೆಯ ವ್ಯಕ್ತಿಯಾಗಿದ್ದು, ಪ್ರಥಮ ಕುಲಪತಿಯವರಾಗಿರುತ್ತಾರೆ. ಈ ಪ್ರಶಸ್ತಿಯನ್ನು ಗಳಿಸುವುದರ ಮೂಲಕ ಅವರು ಅಧ್ಯಯನ ಹಾಗೂ ಸಂಶೋಧನೆಯ ಕ್ಷೇತ್ರಕ್ಕೆ ಕೀರ್ತಿ ತಂದಿರುವುದಲ್ಲದೆ, ಮಂಗಳೂರು ವಿಶ್ವವಿದ್ಯಾನಿಲಯಕ್ಕೂ ಹೆಮ್ಮೆಯನ್ನುಂಟು ಮಾಡಿರುತ್ತಾರೆ. ಇಂತಹ ಪ್ರಶಸ್ತಿಗಳು ಅವರಿಗೆ ಇನ್ನೂ ಹೆಚ್ಚಾಗಿ ದೊರಕುವಂತಾಗಲಿ" ಎಂದು ಅಭಿನಂದಿಸಿದರು. ಸಿಂಡಿಕೇಟು ಸದಸ್ಯರು ನೀಡಿದ ಅಭಿನಂದನೆಯನ್ನು ಒಪ್ಪಿಕೊಳ್ಳುತ್ತಾ, ಕುಲಪತಿಯವರು, ಸಿಂಡಿಕೇಟ್ ಸದಸ್ಯರು ಮತ್ತು ಮಂಗಳೂರು ವಿಶ್ವವಿದ್ಯಾನಿಲಯವು ಇದುವರೆಗೆ ನೀಡಿರುವ ಪ್ರೋತ್ಸಾಹ ಹಾಗೂ ಉತ್ತೇಜನಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿ ತಮ್ಮ ಅಧ್ಯಯನ ಹಾಗೂ ಸಂಶೋಧನಾ ಚಟುವಟಿಕೆಗಳನ್ನು ನಿರಂತರ ಶ್ರದ್ಧೆ ಹಾಗೂ ಬದ್ದತೆಯಿಂದ ಮುಂದುವರಿಸಿಕೊಂಡು ಹೋಗುವುದಾಗಿ ತಿಳಿಸಿದರು.

2. ಶ್ರೀ ಅಶೋಕ್ ಕುಮಾರ್ ರೈ, ಸಿಂಡಿಕೇಟು ಸದಸ್ಯರು ಪುತ್ತೂರು ತಾಲೂಕಿನ ಬೆಟ್ಟಂಪಾಡಿಯಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜನ್ನು ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಮಾರ್ಪಡಿಸಲು ಕ್ರಮ ಕೈಗೊಳ್ಳಲು ಕೋರಿಕೊಂಡ ಕುರಿತು ಚರ್ಚೆ ನಡೆಸಿದ ಸಿಂಡಿಕೇಟು ಸಭೆಯು ಸರಕಾರದಿಂದ, ಕಾಲೇಜು ಅಭಿವೃದ್ಧಿ ಮಂಡಳಿಯಿಂದ ಹಾಗೂ ಸ್ಥಳೀಯ ರಾಜಕೀಯ ನಾಯಕರು ಮತ್ತು

ಜನರಿಂದ ಸೂಕ್ತ ಪ್ರಸ್ತಾವನೆ ಬಂದಲ್ಲಿ ಸರ್ಕಾರದೊಂದಿಗೆ ಚರ್ಚಿಸಿ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

3. ಶ್ರೀ ಹರೀಶ್ ಆಚಾರ್, ಸಿಂಡಿಕೇಟು ಸದಸ್ಯರು ಇವರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು (ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಮತ್ತು ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ) ಇವುಗಳಿಗೆ "ಸ್ನಾತಕೋತ್ತರ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರ" ಎಂಬ ಹೆಸರನ್ನು ನೀಡುವಂತೆ ಕೋರಿಕೊಂಡ ಪ್ರಸ್ತಾವನೆಯನ್ನು ಸಭೆಯು ಚರ್ಚಿಸಿತು. ಕುಲಪತಿಗಳು ಇದಕ್ಕೆ ಪ್ರತಿಕ್ರಿಯೆಯನ್ನು ನೀಡುತ್ತಾ ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

4. ಸಿಂಡಿಕೇಟು ಸಭೆಗೆ ಸಲ್ಲಿಸಲಾಗುವ ಅನುಸರಣಾ ವರದಿಯಲ್ಲಿ ವಿಷಯ ಮತ್ತು ನಿರ್ಣಯ ಇವುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅಂಶಗಳನ್ನು ಅನುಸರಣಾ ವರದಿಯಲ್ಲಿ ನೀಡಲಾಗುತ್ತಿಲ್ಲ ಎಂದು ಅಭಿಪ್ರಾಯಪಟ್ಟ ಸಭೆಯು ಇನ್ನು ಮುಂದೆ ಅನುಸರಣಾ ವರದಿಯಲ್ಲಿ ಮಾಹಿತಿಯನ್ನು ವಿಸ್ತೃತವಾಗಿ ನಮೂದಿಸಬೇಕೆಂದು ಕುಲಸಚಿವರಿಗೆ ಸೂಚಿಸಿತು.

## ಪ್ರಸ್ತಾವನೆ

**I ನಡಾವಳಿಗಳ ದೃಢೀಕರಣ**

ದಿನಾಂಕ 20.12.2016ರಂದು ನಡೆದ 2016ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

1. ದಿನಾಂಕ 22.10.2016ರಂದು ನಡೆದ 2016ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.
2. ದಿನಾಂಕ 02.12.2016 ರಂದು ನಡೆದ ಸಿಂಡಿಕೇಟಿನ 2016ನೇ ಸಾಲಿನ ತೃತೀಯ ವಿಶೇಷ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ1:1(2017)

**ವಿಷಯ:** ಅಕ್ಟೋಬರ್/ನವೆಂಬರ್/ಡಿಸೆಂಬರ್ 2016ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ/

ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ವಿಶ್ವವಿದ್ಯಾನಿಲಯದ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿ ತನಿಖೆ ನಡೆಸಿ ತಯಾರಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ವರದಿಯಲ್ಲಿ ತಿಳಿಸಿದ ಶಿಫಾರಸ್ಸನ್ನು ಅನುಮೋದಿಸಲಾಯಿತು. ಅಲ್ಲದೆ ಎಲ್ಲೆಲ್ಲಿ ಶಿಕ್ಷೆಯ ಕುರಿತು " The material not relevant to the subject of the examination. Therefore, the candidate punished with severe warning and a fine of Rs. ……. ಎಂದು ಶಿಫಾರಸ್ಸು ಇದೆಯೋ ಅಲ್ಲಿ Therefore ಬದಲು However ಎಂದು ತಿದ್ದುಪಡಿಮಾಡಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ1:2(2017)

**ವಿಷಯ:** ದಿನಾಂಕ 01.07.2016ರವರೆಗಿನ ಬಿ.ಎ./ಬಿ.ಎಸ್ಸಿ./ಬಿ.ಕಾಂ./ಬಿ.ಎಸ್.ಡಬ್ಲ್ಯು ಎಲ್‌ಎಲ್.ಬಿ./ ಬಿ.ಎಡ್/ಬಿ.ಎ.(ಹೆಚ್.ಆರ್.ಡಿ.)/ ಬಿ.ಬಿ.ಎಂ./ಬಿ.ಹೆಚ್.ಎಂ./ಬಿ.ಹೆಚ್.ಎಸ್./ಬಿ.ಸಿ.ಎ./ಬಿ.ಎಸ್ಸಿ. ಫ್ಯಾಷನ್/ಗಾರ್ಮೆಂಟ್ ಡಿಸೈನ್ ಮತ್ತು ಬಿ.ಎಸ್ಸಿ. ಇಂಟೀರಿಯರ್ ಡಿಸೈನ್ ಆ್ಯಂಡ್ ಡೆಕೊರೇಶನ್/ಬಿ.ಪಿ.ಎಡ್./ ಬಿ.ಎಸ್ಸಿ (ಎಫ್.ಎನ್.ಡಿ.) / ಬಿ.ಎ. ಸೆಕ್ಯೂರಿಟಿ ಆ್ಯಂಡ್ ಡಿಟೆಕ್ಟಿವ್ ಸೈನ್ಸ್ ಪದವಿ ಕೋರ್ಸಿಗೆ ಸಂಬಂಧಿಸಿದಂತೆ ಅಧ್ಯಾಪಕರ ಜೇಷ್ಠತಾ ಪಟ್ಟಿ ಅನುಮೋದನೆ ಕುರಿತು.

**ನಿರ್ಣಯ:** ಅಧ್ಯಾಪಕರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ1:3(2017)

**ವಿಷಯ:** ಕರಾವಳಿ ಕ್ರಿಕೆಟ್ ಕ್ಲಿನಿಕ್ ಸಂಸ್ಥೆಗೆ ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇಲ್ಲಿನ ಆಟದ ಮೈದಾನವನ್ನು ಬಳಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಈ ವಿಷಯಕ್ಕೆ ಸಂಬಂಧಿಸಿದಂತೆ, ಕೆಳಕಂಡ ಮಾಹಿತಿಯನ್ನು ಕಾಲೇಜಿನ ಪ್ರಾಂಶುಪಾಲರಿಂದ ಪಡೆದುಕೊಂಡು ಮರುಮಂಡಿಸಲು ಕುಲಸಚಿವರಿಗೆ ಸೂಚಿಸಲಾಯಿತು.

ಸದರಿ ಸಂಸ್ಥೆಯು ಉಚಿತವಾಗಿ ತರಬೇತಿ ನೀಡುತ್ತದೆಯೋ ಅಥವಾ ಇದೊಂದು ಲಾಭ ಗಳಿಸುವ ಉದ್ದೇಶದಿಂದ ಕೈಗೊಳ್ಳಲಾದ ಯೋಜನೆಯೋ? ಕಾಲೇಜಿನ ಮೈದಾನದ ಎಷ್ಟು ಭಾಗವನ್ನು ಸದರಿ ಸಂಸ್ಥೆಯು ಪಡೆಯಲಿಚ್ಛಿಸುತ್ತದೇ? ನೀಡಬೇಕಾದ ಬಾಡಿಗೆಯ ನಿರ್ಧಾರ, ಒಪ್ಪಂದದ ಅವಧಿ, ವಿಶ್ವವಿದ್ಯಾನಿಲಯ ಕಾಲೇಜಿನ ವಿದ್ಯಾರ್ಥಿಗಳಿಗೆ ಸಂಸ್ಥೆಯಿಂದ ದೊರೆಯುವ ಲಾಭಗಳು, ಸಂಸ್ಥೆಗೆ ನೀಡಲಾಗುವ ಹಕ್ಕುಗಳು ಇತ್ಯಾದಿಗಳು:

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ1:4(2017)

**ವಿಷಯ:** ಮಾನಸ ಎಜ್ಯುಕೇಶನಲ್ ಫೌಂಡೇಶನ್ ಫಾರ್ ಮೆಂಟಲ್ ಹೆಲ್ತ್, ಮಂಗಳೂರು ಸಂಸ್ಥೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕೇಂದ್ರದ ಅಧ್ಯಯನ ಕೇಂದ್ರವನ್ನಾಗಿ ಮಾನ್ಯತೆ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ1:5(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ/ಸರಕಾರಿ/ಘಟಕ ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳ/ಪ್ರಭಾರ ಪ್ರಾಂಶುಪಾಲರುಗಳ ದಿನಾಂಕ 1.07.2016 ರಲ್ಲಿ ಇದ್ದಂತೆ ತಯಾರಿಸಲಾದ ಜೇಷ್ಠತಾ ಪಟ್ಟಿ ಅನುಮೋದಿಸುವ ಬಗ್ಗೆ.

**ನಿರ್ಣಯ:** ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ1:6(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಪ್ರೊ.ಮಲ್ಲಿಕಾರ್ಜುನಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ವಿಭಾಗ ಇವರ ಅಭಿಪ್ರಾಯ ಪಡೆದು ಅವರು ಒಪ್ಪಿದಲ್ಲಿ ಅವರನ್ನು ಉಳಿದ ಅವಧಿಗೆ ನೇಮಕಮಾಡುವುದು; ಅವರು ಅಧ್ಯಕ್ಷ ಸ್ಥಾನವನ್ನು ವಹಿಸಲು ನಿರಾಕರಿಸಿದ್ದಲ್ಲಿ, ವಾಣಿಜ್ಯ ನಿಕಾಯದ ಡೀನರನ್ನು ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ1:7(2017)

**ವಿಷಯ:** ಶ್ರೀ ಸುಭಾಸ್ ಹೊಸೂರು (ಎಸ್.ಬಿ.ಶರ್ಮ), ಉಪಕುಲಸಚಿವರು, ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯ ಪಿಂಚಣಿ ವಂತಿಗೆಯನ್ನು ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ1:8(2017)

**ವಿಷಯ:** ಶ್ರೀ ಹರೀಶ್ ಕುಮಾರ್ ಕೆ., ಹಿರಿಯ ಸಹಾಯಕ, ಕುಲಸಚಿವರ ಕಚೇರಿ, ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ1:9(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯವರು ವಾಷಿಂಗ್ಟನ್‌ನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪ್ರೊ.ಕೆ.ಭೈರಪ್ಪ, ಮಾನ್ಯ ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ ಇವರು Washington DC ಇಲ್ಲಿ ನಡೆಯಲಿರುವ The Association of International Education Administrators' (AIEA) Annual Conference AIEA 2017ರಲ್ಲಿ ದಿನಾಂಕ 15.02.2017 ರಿಂದ ದಿನಾಂಕ 24.02.2017ರ ವರೆಗೆ ಭಾಗವಹಿಸಲು ಅನುಮತಿ ನೀಡಲು ನಿರ್ಣಯಿಸಲಾಯಿತು. ಸದರಿ ಭೇಟಿಗೆ ಸಂಬಂಧಿಸಿದಂತೆ ಪ್ರಯಾಣ ಹಾಗೂ ಇತರ ವೆಚ್ಚಗಳನ್ನು ವಿಶ್ವವಿದ್ಯಾನಿಲಯವೇ ಭರಿಸಲು ಅನುಮತಿ ನೀಡಲಾಯಿತು. ಅಲ್ಲದೆ ಈ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ಸರ್ಕಾರದಿಂದ ಅನುಮೋದನೆಗೊಂಡ ಪ್ರಸ್ತಾವನೆಯನ್ನು ರಾಜ್ಯ ಸರಕಾರದ ಮೂಲಕ ಮಾನ್ಯ ಕುಲಾಧಿಪತಿಯವರ ಅನುಮೋದನೆಗೆ ಸಲ್ಲಿಸಲು ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ1:10(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮಟ್ಟದ ಶಿಕ್ಷಕರಿಗೆ ಕೇಂದ್ರೀಯ ಮೌಲ್ಯಮಾಪನ ಪರೀಕ್ಷಾ ಕಾರ್ಯದ ದಿನಭತ್ಯೆ, ಸ್ಥಳೀಯ ಭತ್ಯೆ ಹಾಗೂ ನಾನ್ ಯುಜಿಸಿ ವೇತನ ಶ್ರೇಣಿಯ / External ಶಿಕ್ಷಕರಿಗೆ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ1:11(2017)

**ವಿಷಯ:** ಪಿಹೆಚ್.ಡಿ. ಪದವಿ ಪ್ರದಾನ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ1 :12(2017)

**ವಿಷಯ:** ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿ ನಡೆಸಲ್ಪಡುವ ಕೋರ್ಸುಗಳಿಗೆ ವಿದೇಶಿ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡುವ ಸಲುವಾಗಿ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ಮಂಜೂರು ಮಾಡುವ ಕುರಿತು.

**ನಿರ್ಣಯ:** ಹತ್ತು ವಿದ್ಯಾರ್ಥಿಗಳನ್ನು ಹೆಚ್ಚುವರಿ ತೆಗೆದುಕೊಳ್ಳಲು ಅನುಮತಿ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಹವಿ ಸಾ.ಸ1:13(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2016–17ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 29.12.2016ರಂದು ನಡೆದ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಕಾನೂನು ಘಟಕ ಸಾ.ಸ1:14(2017)

**ವಿಷಯ :** ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟಿನಿಂದ ಅನುಮೋದನೆಗೊಂಡ ವಕೀಲರ ಯಾದಿಯಲ್ಲಿನ ವಕೀಲರಿಗೆ ನಿಗದಿಪಡಿಸಿರುವ ಶುಲ್ಕದಲ್ಲಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಲಾಗುವ ರಿಟ್ ಅರ್ಜಿಗಳ ಗುಂಪಿಗೆ (batch of writ petitions) ನಿಗದಿಪಡಿಸಿರುವ ಶುಲ್ಕ ಪರಿಷ್ಕರಿಸುವ ಬಗ್ಗೆ ಹಾಗೂ ಹಾಲಿ ವಕೀಲರ (Panel of Advocates) ಕಾಲಾವಧಿ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದ ಸಿಂಡಿಕೇಟಿನಿಂದ ಅನುಮೋದನೆಗೊಂಡ ವಕೀಲರ ಯಾದಿಯಲ್ಲಿನ ವಕೀಲರಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಲಾಗುವ ರಿಟ್ ಅರ್ಜಿಗಳ ಗುಂಪಿನಲ್ಲಿ (batch of writ petitions) ಮೊದಲ ರಿಟ್ ಅರ್ಜಿಗೆ ರೂ.9,000/– ಮತ್ತು ಪ್ರತಿ ಹೆಚ್ಚುವರಿ ರಿಟ್ ಅರ್ಜಿಗೆ ರೂ.1,000/– ಮೀರದಂತೆ ನೀಡಬಹುದು ಹಾಗೂ ವಿಶ್ವವಿದ್ಯಾನಿಲಯದ ಯಾದಿಯಲ್ಲಿರುವ ವಕೀಲರ ಕಾಲಮಿತಿಯನ್ನು ದಿನಾಂಕ 14.01.2015ರ ಸಿಂಡಿಕೇಟು ಸಭೆಯ ನಿರ್ಣಯದ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಟ 03 ವರ್ಷದ ಅವಧಿಯವರೆಗೆ ನಿಗದಿಗೊಳಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ1:15(2017)

**ವಿಷಯ:** ಅಕ್ಟೋಬರ್/ನವೆಂಬರ್/ಡಿಸೆಂಬರ್ 2016ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ/ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ವಿಶ್ವವಿದ್ಯಾನಿಲಯದ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿ ತನಿಖೆ ನಡೆಸಿ ತಯಾರಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ವರದಿಯಲ್ಲಿ ತಿಳಿಸಿದ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ1:16(2017)

**ವಿಷಯ:** ಕಿರಿಯ ಅಭಿಯಂತರ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳ ಕುರಿತಾದ ಕರಡು ಅನುಶಾಸನ.

**ನಿರ್ಣಯ:** ಕಿರಿಯ ಅಭಿಯಂತರರ ಹುದ್ದೆಗಳ ನೇರ ನೇಮಕಾತಿಗೆ ಅಳವಡಿಸಿರುವ ವಿದ್ಯಾರ್ಹತೆ ಮತ್ತು ಇತರ ಅರ್ಹತೆಗಳನ್ನೊಳಗೊಂಡಂತೆ ರಚಿಸಲಾದ ಕರಡು ಅನುಶಾಸನವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ1:17(2017)

**ವಿಷಯ:** 2016–17ನೇ ಸಾಲಿನ ವೈ–ಫೈ ನೆಟ್ವರ್ಕಿಂಗ್ ಐಟಮ್‌ನ ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ1:18(2017)

**ವಿಷಯ:** DST-SERB ಪ್ರಾಜೆಕ್ಟ್, ಗಣಕ ವಿಜ್ಞಾನ ವಿಭಾಗ– Computer Server ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 24.01.2017ರಂದು ನಡೆದ ಖರೀದಿ ಸಭೆಯ ಶಿಫಾರಸ್ಸಿನಂತೆ ಪ್ರಾಜೆಕ್ಟ್ ಅನುದಾನದ

ಲಭ್ಯತೆಗನುಸಾರ ಲೆನೆವೊ ಸಿಸ್ಟಂ ಕಂಪ್ಯೂಟರ್ ಸರ್ವರನ್ನು ಮಾತ್ರ ರೂ.3,61,865/–ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ1:19(2017)

**ವಿಷಯ:** DST-SERB ಪ್ರಾಜೆಕ್ಟ್, ರಸಾಯನಶಾಸ್ತ್ರ ವಿಭಾಗ– ಉಪಕರಣ ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 24.01.2017ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ1:20(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕಟ್ಟಡಗಳಲ್ಲಿ ''ಸೌರ ಮೇಲ್ಛಾವಣಿ ವ್ಯವಸ್ಥೆ'' ಕಲ್ಪಿಸುವ ಬಗ್ಗೆ.

**ನಿರ್ಣಯ:** ದಿನಾಂಕ 24.01.2017ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಶ್ರೀ ಕೆ. ನಾರಾಯಣ ರಾವ್, Prop. Matrix Technologies Inc., Bangalore ಇವರು ನಮೂದಿಸಿರುವ ಮೊತ್ತ ರೂ.2,13,46,762/– ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ1:21 (2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳನ್ನು ದಾಖಲಿಸಲು ಕ್ಯಾಮರ ಮತ್ತು ಲೆನ್ಸ್‌ಗಳ ಖರೀದಿ ಬಗ್ಗೆ.

**ನಿರ್ಣಯ:** ದಿನಾಂಕ 24.01.2017ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ1:22 (2017)

**ವಿಷಯ:** ಪದವಿ ಮಟ್ಟದ ದೃಶ್ಯಕಲಾ (Visual Arts) ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ1:23 (2017)

**ವಿಷಯ:** ಶ್ರೀ ಪ್ರಸನ್ನ ಕುಮಾರ್ ರೈ ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ನಿರ್ಣಯ:** ತರಬೇತಿ ಕಾರ್ಯಕ್ರಮವು ನಿರಂತರವಾಗಿ ನಡೆಯುವಂತೆ ಕಾರ್ಯ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಲು ಡೆಪ್ಯೂಟಿ ಡೈರೆಕ್ಟರ್ ಪಾರ್ ಲರ್ನಿಂಗ್ ಎಂಪ್ಲಾಯ್‌ಮೆಂಟ್ ಸೆಲೆಕ್ಷನ್ ಪ್ರೋಸೆಸ್, ಎಂಬ ಹುದ್ದೆಯನ್ನು ಸೃಷ್ಟಿಸಿ ನಾಮನಿರ್ದೇಶನ ಮಾಡಲು ನಿರ್ಧರಿಸಲಾಯಿತು. ಅಲ್ಲದೆ ವಿಶ್ವವಿದ್ಯಾನಿಲಯ ಎಂಪ್ಲಾಯ್‌ಮೆಂಟ್ ಬ್ಯೂರೋ ಇದರೊಂದಿಗೆ ಕಾರ್ಯನಿರ್ವಹಿಸಲು ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ1:24(2017)

**ವಿಷಯ:** ಪ್ರೊ. ವೈ ಮುನಿರಾಜು, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ನಿರ್ಣಯ:** ಪಿಎಚ್.ಡಿ. ಕಾರ್ಯಕ್ರಮಕ್ಕೆ ಮಾರ್ಗದರ್ಶಕರಾಗಲು ಆಸಕ್ತಿ ತೋರದೆ ಅರ್ಜಿ ಸಲ್ಲಿಸಲು ನಿರಾಕರಿಸುವ ಸಹಾಯಕ ಪ್ರಾಧ್ಯಾಪಕ ಅಥವಾ ಇತರ ದರ್ಜೆಯ ಪ್ರಾಧ್ಯಾಪಕರಿಗೆ ಭಡ್ತಿ ನೀಡುವುದನ್ನು ತಡೆಹಿಡಿಯಬೇಕೆಂದು ನಿರ್ಣಯಿಸಲಾಯಿತು ಮತ್ತು ಅವರು ಭಡ್ತಿಗೆ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಬಾರದೆಂದು ಹಾಗೂ ವಿಶ್ವವಿದ್ಯಾನಿಲಯ ನಿಯಮಗಳ ಪ್ರಕಾರ ಕಾನೂನು ಕ್ರಮಕೈಗೊಳ್ಳಲು ಕುಲಸಚಿವರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ1:25(2017)

**ವಿಷಯ:** ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಛೇರಿಗಳಿಗೆ 'ಗ್ರೂಪ್ ಡಿ'ಕಾರ್ಯಕ್ಕೆ ಅಗತ್ಯವಿರುವ ಮಾನವ ಸೇವೆಗಳ ಪೂರೈಕೆ – ಹೊರಗುತ್ತಿಗೆ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 24.01.2017 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೆ.ಕೆನಾನ್ ಡಿಟೆಕ್ಟಿವ್ ಆಂಡ್ ಸೆಕ್ಯೂರಿಟಿ ಸರ್ವಿಸಸ್ ಇವರು ನಮೂದಿಸಿದ ಕನಿಷ್ಠ ದರ ಒಬ್ಬರಿಗೆ ರೂ.13,987.18/– ವನ್ನು ವಿಶ್ವವಿದ್ಯಾನಿಲಯವು ವಿಧಿಸಿರುವ ಕಡ್ಡಾಯ ಷರತ್ತುಗಳೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ1:26(2017)

**ವಿಷಯ:** ವಿಶ್ವವಿದ್ಯಾನಿಲಯದ ಆವರಣದ ತೋಟಗಾರಿಕಾ ನಿರ್ವಹಣೆಗೆ ಅಗತ್ಯವಿರುವ ಮಾನವ ಸೇವೆಗಳ ಪೂರೈಕೆ – ಹೊರಗುತ್ತಿಗೆ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 24.01.2017 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೆ.ಕೆನಾನ್ ಡಿಟೆಕ್ಟಿವ್ ಆಂಡ್ ಸೆಕ್ಯೂರಿಟಿ ಸರ್ವಿಸಸ್ ಇವರು ನಮೂದಿಸಿದ ಕನಿಷ್ಠ ದರ ಒಬ್ಬರಿಗೆ

ರೂ.13,987.18/– ವನ್ನು ವಿಶ್ವವಿದ್ಯಾನಿಲಯವು ವಿಧಿಸಿರುವ ಕಡ್ಡಾಯ ಷರತ್ತುಗಳೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ1:27(2017)

**ವಿಷಯ:** ವಿಶ್ವವಿದ್ಯಾನಿಲಯದ ಆವರಣದ ಶುಚಿತ್ವ ಕಾರ್ಯಕ್ಕೆ ಅಗತ್ಯವಿರುವ ಮಾನವ ಸೇವೆಗಳ ಪೂರೈಕೆ – ಹೊರಗುತ್ತಿಗೆ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 24.01.2017 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೆ.ಕೆನಾನ್ ಡಿಟೆಕ್ಟಿವ್ ಆಂಡ್ ಸೆಕ್ಯೂರಿಟಿ ಸರ್ವಿಸಸ್ ಇವರು ನಮೂದಿಸಿದ ಕನಿಷ್ಠ ದರ ಒಬ್ಬರಿಗೆ ರೂ.13,987.18/– ವನ್ನು ವಿಶ್ವವಿದ್ಯಾನಿಲಯವು ವಿಧಿಸಿರುವ ಕಡ್ಡಾಯ ಷರತ್ತುಗಳೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ.ಸಾ.ಸ1:28(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಘಟಕ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಭದ್ರತಾ ವ್ಯವಸ್ಥೆ ಗುತ್ತಿಗೆ ಬಗ್ಗೆ

**ನಿರ್ಣಯ:** ದಿನಾಂಕ 24.01.2017 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೆ.ಕೆನಾನ್ ಡಿಟೆಕ್ಟಿವ್ ಆಂಡ್ ಸೆಕ್ಯೂರಿಟಿ ಸರ್ವಿಸಸ್, ಬೆಂಗಳೂರು ಇವರು ನಮೂದಿಸಿದ ಕನಿಷ್ಠ ದರ ಸೆಕ್ಯೂರಿಟಿ ಗಾರ್ಡ್‌ಗೆ ರೂ.15,574.78 ಮತ್ತು ಸೆಕ್ಯೂರಿಟಿ ಸುಪರ್ ವೈಸರ್‌ಗೆ ರೂ.16,994.61ನ್ನು ವಿಶ್ವವಿದ್ಯಾನಿಲಯವು ವಿಧಿಸಿರುವ ಕಡ್ಡಾಯ ಷರತ್ತುಗಳೊಂದಿಗೆ ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು